ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 402
ವಿಧಾನ ಪರಿಷತ್ ಸದಸ್ಯರ ಹೆಸರು : ಶ್ರೀ ಜಿ. ರಘು ಆಚಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸುವವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು
ಉತ್ತರಿಸುವ ದಿನಾಂಕ : 18.07.2019

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಚಿತ್ರದುರ್ಗದಲ್ಲಿ ಎಲ್.ಇ.ಡಿ ಬಲ್ಬ್ ತಯಾರಿಕಾ ಘಟಕ ತೆರೆಯುವ ಬಗ್ಗೆ ಸರ್ಕಾರ ಕಳೆದ ಆಯವ್ಯಯದಲ್ಲಿ ಘೋಷಿಸಿದ್ದ ಪ್ರಸ್ತಾವನೆ ಯಾವ ಹಂತದಲ್ಲಿದೆ; (ಮಾಹಿತಿ ಒದಗಿಸುವುದು)	ರಾಜ್ಯದ ಉತ್ಪಾದನಾ ಕ್ಷೇತ್ರಕ್ಕೆ ಅವಶ್ಯವಿರುವ ಪುಷ್ಟಿಯನ್ನು ನೀಡಲು ಹಾಗೂ ಚೈನಾ ದೇಶದಿಂದ ಅಪಾರ ಸಂಖ್ಯೆಯಲ್ಲಿ ಆಮದಾಗುತ್ತಿರುವ ಉತ್ಪನ್ನಗಳನ್ನು ನಮ್ಮ ರಾಜ್ಯದಲ್ಲಿಯೇ ಉತ್ಪಾದಿಸುವ ಸಲುವಾಗಿ ರಾಜ್ಯದ ಉತ್ಪಾದನಾ ಕ್ಷೇತ್ರವನ್ನು ಪುನಃಶ್ಚೇತನಗೊಳಿಸುವ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳು 2018–19ನೇ ಸಾಲಿನ ಆಯವ್ಯಯ ಭಾಷಣದಲ್ಲಿ "ಕಾಂಪೀಟ್ ವಿತ್ ಚೈನಾ" ಎಂಬ ವಿನೂತನ ಯೋಜನೆಯನ್ನು ಘೋಷಿಸಿರುತ್ತಾರೆ. ಈ ಯೋಜನೆಯಡಿ ರಾಜ್ಯದ 9 ಜಿಲ್ಲೆಗಳನ್ನು ಆಯಾ ಪ್ರದೇಶದ ಸಂಪನ್ಮೂಲ ಮತ್ತು ವೃತ್ತಿ ಕೌಶಲ್ಯವನ್ನು ಆಧರಿಸಿ ನಿರ್ದಿಷ್ಟ ಉತ್ಪನ್ನಗಳನ್ನು ತಯಾರಿಸುವ ಕ್ಲಸ್ಟರ್‌ಗಳಾಗಿ ಅಭಿವೃದ್ಧಿ ಪಡಿಸಲಾಗುವುದು. ಈ 9 ಜಿಲ್ಲೆಗಳಲ್ಲಿ ಚಿತ್ರದುರ್ಗ ಜಿಲ್ಲೆಯನ್ನು **"ಎಲ್.ಇ.ಡಿ ಲೈಟ್‌ಗಳ ಉತ್ಪಾದನೆ ಮತ್ತು ಜೋಡಣೆ"** ಕ್ಲಸ್ಟರಾಗಿ ಅಭಿವೃದ್ಧಿಪಡಿಸಲಾಗುತ್ತಿದೆ. ಚಿತ್ರದುರ್ಗ ಎಲ್.ಇ.ಡಿ ಕ್ಲಸ್ಟರ್‌ನ ಈವರೆಗಿನ ಪ್ರಗತಿ ಕೆಳಕಂಡಂತಿದೆ. ➢ ಯೋಜನೆಯ ಅನುಷ್ಠಾನ ರೂಪು–ರೇಷೆಗಳನ್ನು ತಯಾರಿಸುವ ಸಂಬಂಧ ಸಲಹೆ ಸೂಚನೆಗಳನ್ನು ನೀಡಲು ಗುರುತಿಸಲಾದ ಚಟುವಟಿಕೆಯ ಪ್ರಮುಖ ಕೈಗಾರಿಕೋದ್ಯಮಿಗಳನ್ನು ಮತ್ತು ವಿಷಯ ತಜ್ಞರನ್ನೊಳಗೊಂಡಂತೆ "ವಿಶನ್ ಗ್ರೂಪ್"ನ್ನು ಸ್ಥಾಪಿಸಲಾಗಿದೆ. ➢ ವಿಶನ್ ಗ್ರೂಪ್ ಸದಸ್ಯರುಗಳು ಕ್ಲಸ್ಟರ್ ನೋಡಲ್ ಅಧಿಕಾರಿ ಮತ್ತು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರೊಂದಿಗೆ ಸಂಬಂಧಪಟ್ಟ ಕ್ಲಸ್ಟರ್ ಜಿಲ್ಲೆಗಳಿಗೆ ಭೇಟಿ ನೀಡಿ ಕ್ಲಸ್ಟರ್ ಅಭಿವೃದ್ಧಿಯ ಬಗ್ಗೆ ಅಧ್ಯಯನ ನಡೆಸಿರುತ್ತಾರೆ ಹಾಗೂ ಜಿಲ್ಲಾಧಿಕಾರಿಗಳು ಮತ್ತು ಸಂಬಂಧಪಟ್ಟ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಿರುತ್ತಾರೆ. ➢ ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ದೊಡ್ಡಉಳ್ಳಾರ್ತಿ ಮತ್ತು ಖುದಾಪುರದಲ್ಲಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು ಅಭಿವೃದ್ಧಿಪಡಿಸಿರುವ ಕೈಗಾರಿಕಾ ವಸಹಾತುಗಳಲ್ಲಿ ಎಲ್.ಇ.ಡಿ ಲೈಟ್ ತಯಾರಿಕಾ ಘಟಕಗಳಿಗೆ ಭೂಮಿಯನ್ನು ಗುರುತಿಸಲಾಗಿದೆ. ➢ ದೊಡ್ಡಉಳ್ಳಾರ್ತಿ ಕೈಗಾರಿಕಾ ವಸಹಾತುವಿನಲ್ಲಿ ಘಟಕ ಸ್ಥಾಪಿಸಲು ಮೆ. ವಿಶ್ಯುಯಲ್ ಕಾಂಫರ್ಟ್ ರವರು ಇಚ್ಛೆವ್ಯಕ್ತಪಡಿಸಿರುತ್ತಾರೆ. ಈ ಘಟಕವು ರೂ.15.00 ಕೋಟಿ ಬಂಡವಾಳ ಹೂಡಿ 1000 ಉದ್ಯೋಗ ಸೃಜಿಸಲಿದೆ. ಮುಂದುವರೆದು, ಸಿಸ್ಕಾ ಎಲ್.ಇ.ಡಿ, ಕ್ವಾಲಿಟಿ ಫೋಟಾನಿಕ್ಸ್, ಲೈಟಿಂಗ್ ಟೆಕ್ನಾಲಾಜೀಸ್ ಸೇರಿದಂತೆ ಇನ್ನಿತರೆ ಕೈಗಾರಿಕೆಗಳೊಂದಿಗೆ ಬಂಡವಾಳ ಹೂಡಿಕೆ ಬಗ್ಗೆ ಚರ್ಚಿಸಲಾಗುತ್ತಿದೆ.

		➢ "ವಿಶನ್ ಗ್ರೂಪ್" ರವರು ಸದರಿ ಕ್ಲಸ್ಟರ್‌ನ ಅಭಿವೃದ್ಧಿ ಸಂಬಂಧ ಈ ಕೆಳಕಂಡ ವಿಷಯಗಳ ಬಗ್ಗೆ ಹಲವಾರು ಸಭೆಗಳನ್ನು ನಡೆಸಿ ಚರ್ಚಿಸುತ್ತಿದ್ದು ವರದಿ ನಿರೀಕ್ಷಿಸಿದೆ. (ಅ) ಕ್ಲಸ್ಟರ್‌ನಲ್ಲಿ ತಯಾರಿಸುವ ಉತ್ಪನ್ನಗಳು ಮತ್ತು ಬಂಡವಾಳ ಆಕರ್ಷಣೆ (ಆ) ಸರ್ಕಾರದಿಂದ ಅವಶ್ಯವಿರುವ ಪ್ರೋತ್ಸಾಹ ಮತ್ತು ರಿಯಾಯಿತಿಗಳು (ಇ) ತರಬೇತಿ ಅವಶ್ಯಕತೆಗಳು (ಈ) ಮೂಲಭೂತ ಸೌಕರ್ಯ ಅವಶ್ಯಕತೆಗಳು ➢ ಸದರಿ ವಲಯಕ್ಕೆ ಅವಶ್ಯವಿರುವ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಗುರುತಿಸಲಾಗಿದ್ದು, ಈ ತರಬೇತಿ ಕಾರ್ಯಕ್ರಮಗಳನ್ನು ರೂಡ್‌ಸೆಟ್, ಚಿತ್ರದುರ್ಗ ಮತ್ತು ನ್ಯಾಷನಲ್ ಪಾವರ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಮೂಲಕ ಆಯೋಜಿಸಲು ಯೋಜಿಸಲಾಗಿದೆ.
ಆ	ಯೋಜನೆಯ ಬಗ್ಗೆ ಸಂಪೂರ್ಣ ಮಾಹಿತಿ ಒದಗಿಸುವುದು?	"ಕಾಂಪೀಟ್ ವಿತ್ ಚೈನಾ" ಯೋಜನೆಯಡಿ ಈವರೆಗಿನ ಪ್ರಗತಿಯ ಮಾಹಿತಿಯನ್ನು **ಅನುಬಂಧದಲ್ಲಿ** ಒದಗಿಸಿದೆ.

ಸಿಐ 89 ಎಸ್‌ಪಿಐ 2019

(ಕೆ.ಜೆ. ಜಾರ್ಜ್)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 402ಕ್ಕೆ ಅನುಬಂಧ

"ಕಾಂಪೀಟ್ ವಿತ್ ಚೈನಾ ಕಾರ್ಯಕ್ರಮ"

ಅನುಷ್ಠಾನ ಪ್ರಗತಿ ವರದಿ

(ದಿನಾಂಕ 30.6.2019 ರಂತೆ)

1. **ಯೋಜನೆಯ ಉದ್ದೇಶ:-** ರಾಜ್ಯದ ಉತ್ಪಾದನಾ ಕ್ಷೇತ್ರಕ್ಕೆ ಅವಶ್ಯವಿರುವ ಪುಷ್ಟಿಯನ್ನು ನೀಡಲು ಹಾಗೂ ಚೈನಾ ದೇಶದಿಂದ ಅಪಾರ ಸಂಖ್ಯೆಯಲ್ಲಿ ಆಮದಾಗುತ್ತಿರುವ ಉತ್ಪನ್ನಗಳನ್ನು ನಮ್ಮ ರಾಜ್ಯದಲ್ಲಿಯೇ ಉತ್ಪಾದಿಸುವ ಸಲುವಾಗಿ ರಾಜ್ಯದ ಉತ್ಪಾದನಾ ಕ್ಷೇತ್ರವನ್ನು ಪುನಃಶ್ಚೇತನಗೊಳಿಸುವ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳು 2018-19ನೇ ಸಾಲಿನ ಆಯವ್ಯಯ ಭಾಷಣದಲ್ಲಿ "ಕಾಂಪೀಟ್ ವಿತ್ ಚೈನಾ" ಎಂಬ ವಿನೂತನ ಯೋಜನೆಯನ್ನು ಘೋಷಿಸಿರುತ್ತಾರೆ. ಈ ಯೋಜನೆಯಡಿ ರಾಜ್ಯದ ಕೆಳಕಂಡ 9 ಜಿಲ್ಲೆಗಳನ್ನು ಆಯಾ ಪ್ರದೇಶದ ಸಂಪನ್ಮೂಲ ಮತ್ತು ವೃತ್ತಿ ಕೌಶಲ್ಯವನ್ನು ಆಧರಿಸಿ ನಿರ್ದಿಷ್ಟ ಉತ್ಪನ್ನಗಳನ್ನು ತಯಾರಿಸುವ ಕ್ಲಸ್ಟರ್‌ಗಳಾಗಿ ಅಭಿವೃದ್ಧಿ ಪಡಿಸಲಾಗುವುದು.

	ಜಿಲ್ಲೆ	ಉತ್ಪನ್ನ
1	ಬಳ್ಳಾರಿ	ಸಿದ್ಧ ಉಡುಪು ತಯಾರಿಕೆ ಮತ್ತು ಜವಳಿ
2	ಕೊಪ್ಪಳ	ಟಾಯ್ಸ್ ಮತ್ತು ಮೆಕಾನೈಜ್ಡ್ ಟಾಯ್ಸ್ ಉತ್ಪಾದನೆ ಮತ್ತು ಜೋಡಣೆ
3	ಚಿಕ್ಕಬಳ್ಳಾಪುರ	ಮೊಬೈಲ್ ಫೋನ್ ಬಿಡಿಭಾಗಗಳು ಮತ್ತು ಎಲೆಕ್ಟ್ರಾನಿಕ್ಸ್ ಉತ್ಪಾದನೆ ಮತ್ತು ಜೋಡಣೆ ಕಾಂಪೊನೆಂಟ್ಸ್ ಮತ್ತು ಅಸೆಂಬ್ಲಿಂಗ್
4	ಮೈಸೂರು	ಪ್ರಿಂಟೆಡ್ ಸರ್ಕ್ಯೂಟ್ ಬೋರ್ಡ್ಸ್ (ಪಿಸಿಬಿ) / ಇಂಟಿಗ್ರೇಟೆಡ್ ಸರ್ಕ್ಯೂಟ್ ಬೋರ್ಡ್ಸ್ (ಐಸಿಬಿ) ಉತ್ಪಾದನೆ ಮತ್ತು ಜೋಡಣೆ
5	ಚಿತ್ರದುರ್ಗ	ಎಲ್.ಇ.ಡಿ. ಲೈಟ್‌ಗಳ ಉತ್ಪಾದನೆ ಮತ್ತು ಜೋಡಣೆ
6	ಕಲಬುರಗಿ	ಸೋಲಾರ್ ಪ್ಯಾನೆಲ್ಸ್ ಮತ್ತು ಸಂಬಂಧಿಸಿದ ಬಿಡಿಭಾಗಗಳ ಉತ್ಪಾದನೆ
7	ಹಾಸನ	ಟೈಲ್ಸ್, ಸ್ಯಾನಿಟರಿ ವೇರ್ಸ್ ಮತ್ತು ಬಾತ್‌ರೂಮ್ ಫಿಟ್ಟಿಂಗ್ಸ್ ಉತ್ಪಾದನೆ
8	ಬೀದರ್	ಕೃಷಿ ಉಪಕರಣಗಳು ತಯಾರಿಕೆ
9	ತುಮಕೂರು	ಸ್ಪೋರ್ಟ್ಸ್ ಮತ್ತು ಫಿಟ್‌ನೆಸ್ ಗೂಡ್ಸ್ ಉತ್ಪಾದನೆ

2. **ಯೋಜನೆಯ ಗುರಿ:-** ಗುರುತಿಸಲಾದ ಕ್ಲಸ್ಟರ್‌ಗಳಲ್ಲಿ ನಿರ್ದಿಷ್ಟ ಉತ್ಪನ್ನಗಳನ್ನು ಗ್ರಾಮ ಮಟ್ಟದಿಂದ ಜಿಲ್ಲಾ ಮಟ್ಟದವರೆಗೆ ಉತ್ಪಾದಿಸುವ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಲು ಯೋಜಿಸಲಾಗಿದೆ. ಯೋಜನೆಯ ಅನುಷ್ಠಾನದಿಂದ ಮುಂದಿನ ನಾಲ್ಕು ವರ್ಷಗಳಲ್ಲಿ ಪ್ರತಿ ಕ್ಲಸ್ಟರ್ ಜಿಲ್ಲೆಯಲ್ಲಿ ರೂ.5,000 ಕೋಟಿ ಬಂಡವಾಳ ಆಕರ್ಷಿಸಲು ಮತ್ತು ಒಂದು ಲಕ್ಷ ಉದ್ಯೋಗ ಸೃಜನೆ ಮಾಡುವ ಗುರಿ ಹೊಂದಲಾಗಿದೆ. ಇದಕ್ಕಾಗಿ ಪ್ರತಿ ಜಿಲ್ಲೆಯಲ್ಲಿ ಗುರುತಿಸಲ್ಪಟ್ಟ ಉತ್ಪನ್ನಗಳ ತಯಾರಿಕೆ ಮಾಡಲು ಅವಶ್ಯವಿರುವ ಕೌಶಲ್ಯವನ್ನು ಅಭಿವೃದ್ಧಿ ಪಡಿಸಲು ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

3. **ಯೋಜನೆಯ ಅನುಷ್ಠಾನ ಸಂಸ್ಥೆ ಮತ್ತು ಅವಧಿ:-** ಯೋಜನೆಯ ಅನುಷ್ಠಾನ ಸಂಸ್ಥೆಯಾಗಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯಡಿ ಬರುವ ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರ (ವಿಟಿಪಿಸಿ) ವನ್ನು ನೇಮಕ ಮಾಡಿದೆ. ಯೋಜನೆಯ ಅನುಷ್ಠಾನ ಅವಧಿ 5 ವರ್ಷಗಳಾಗಿರುತ್ತದೆ. (2018-19 ರಿಂದ 2022-23)

4. **ವಿಶನ್ ಗ್ರೂಪ್ ಸ್ಥಾಪನೆ:-** ಯೋಜನೆಯ ಅನುಷ್ಠಾನ ರೂಪು-ರೇಷೆಗಳನ್ನು ತಯಾರಿಸುವ ಸಂಬಂಧ ಸಲಹೆ ಸೂಚನೆಗಳನ್ನು ನೀಡಲು ಗುರುತಿಸಲಾದ ಚಟುವಟಿಕೆಯ ಪ್ರಮುಖ ಕೈಗಾರಿಕೋದ್ಯಮಿಗಳನ್ನು ಮತ್ತು ವಿಷಯ ತಜ್ಞರನ್ನೊಳಗೊಂಡಂತೆ ಕ್ಲಸ್ಟರ್‌ವಾರು 7 ರಿಂದ 9 ಸದಸ್ಯರುಳ್ಳ 9 ತಜ್ಞರ ಸಮಿತಿ (ವಿಶನ್ ಗ್ರೂಪ್) ಗಳನ್ನು ಮಾನ್ಯ ಮುಖ್ಯಮಂತ್ರಿಗಳ ಅನುಮೋದನೆಯೊಂದಿಗೆ ಸ್ಥಾಪಿಸಿ ಸರ್ಕಾರದ ಆದೇಶವನ್ನು ಹೊರಡಿಸಲಾಗಿದೆ. ಹಾಗೆಯೇ ಪ್ರತಿ ವಿಶನ್ ಗ್ರೂಪ್‌ಗೆ ಅಧ್ಯಕ್ಷರನ್ನು ನೇಮಿಸಿ ಸರ್ಕಾರದ ಆದೇಶವನ್ನು ಹೊರಡಿಸಲಾಗಿದೆ.

5. **ಕ್ಲಸ್ಟರ್ ನೋಡಲ್ ಅಧಿಕಾರಿಗಳ ನೇಮಕ:-** ಪ್ರತಿ ಕ್ಲಸ್ಟರ್‌ಗೆ ರಾಜ್ಯ ಮಟ್ಟದಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಅಧಿಕಾರಿಗಳನ್ನು "ನೋಡಲ್ ಅಧಿಕಾರಿಗಳಾಗಿ" ನೇಮಿಸಿ ಸರ್ಕಾರದ ಆದೇಶ ಹೊರಡಿಸಲಾಗಿದೆ. ಟೆಕ್ಸ್‌ಟೈಲ್ಸ್ ಮತ್ತು ಅಗ್ರಿಕಲ್ಚರಲ್ ಇಂಪ್ಲಿಮೆಂಟ್ಸ್ ಕ್ಲಸ್ಟರ್‌ಗಳಿಗೆ ಕ್ರಮವಾಗಿ ಕೈಮಗ್ಗ ಮತ್ತು ಜವಳಿ ಇಲಾಖೆಯ ಹಾಗೂ ಕೃಷಿ ಇಲಾಖೆಯ ಅಧಿಕಾರಿಗಳನ್ನು ಕೋ-ನೋಡಲ್ ಅಧಿಕಾರಿಗಳಾಗಿ ನೇಮಿಸಲಾಗಿದೆ.

6. **ಯೋಜನೆಗೆ ಅನುಮೋದನೆ:-** ರಾಜ್ಯ ಮಂತ್ರಿಮಂಡಲದ ಅನುಮೋದನೆ ಪಡೆದು "ಕಾಂಪೀಟ್ ವಿತ್ ಚೈನಾ" ಹೊಸ ಯೋಜನೆಯ ಅನುಷ್ಠಾನಕ್ಕೆ ದಿನಾಂಕ 14.9.2018 ರಂದು ಸರ್ಕಾರದ ಆದೇಶ ಹೊರಡಿಸಲಾಗಿದೆ.

7. **ವಿಶನ್ ಗ್ರೂಪ್ ಸಭೆಗಳು:-** ಯೋಜನೆಯಡಿ ಸ್ಥಾಪಿಸಲಾದ ಎಲ್ಲಾ 9 ವಿಶನ್ ಗ್ರೂಪ್‌ಗಳ ಹಲವಾರು ಸಭೆಗಳನ್ನು ನಡೆಸಲಾಗಿದೆ. ಸದರಿ ಸಭೆಗಳಲ್ಲಿ ಸಂಬಂಧಪಟ್ಟ ಕ್ಲಸ್ಟರ್ ಚಟುವಟಿಕೆಯಲ್ಲಿನ ಪ್ರಮುಖ ಕೈಗಾರಿಕೋದ್ಯಮಿ ಸದಸ್ಯರು, ವಿಷಯ ತಜ್ಞರು ಮತ್ತು ಸಂಬಂಧಪಟ್ಟ ಇಲಾಖೆಯ ಉನ್ನತ ಅಧಿಕಾರಿಗಳು ಭಾಗವಹಿಸಿರುತ್ತಾರೆ. ಸದರಿ ಸಭೆಗಳಲ್ಲಿ ಉದ್ದೇಶಿತ ಕ್ಲಸ್ಟರ್‌ಗಳನ್ನು ಅಭಿವೃದ್ಧಿ ಪಡಿಸುವ ಸಂಬಂಧ ಈ ಕೆಳಕಂಡ ಪ್ರಮುಖ ವಿಷಯಗಳ ಬಗ್ಗೆ ವ್ಯಾಪಕ ಚರ್ಚೆಗಳನ್ನು ನಡೆಸಲಾಗಿದೆ.

   (ಅ) ಕ್ಲಸ್ಟರ್‌ನಲ್ಲಿ ತಯಾರಿಸುವ ಉತ್ಪನ್ನಗಳು ಮತ್ತು ಬಂಡವಾಳ ಆಕರ್ಷಣೆ
   (ಆ) ಸರ್ಕಾರದಿಂದ ಅವಶ್ಯವಿರುವ ಪ್ರೋತ್ಸಾಹ ಮತ್ತು ರಿಯಾಯಿತಿಗಳು
   (ಇ) ತರಬೇತಿ ಅವಶ್ಯಕತೆಗಳು
   (ಈ) ಮೂಲಭೂತ ಸೌಕರ್ಯ ಅವಶ್ಯಕತೆಗಳು

8. **ಸನ್ಮಾನ್ಯ ಮುಖ್ಯಮಂತ್ರಿಗಳೊಂದಿಗೆ ವಿಶನ್ ಗ್ರೂಪ್‌ಗಳ ಸಂವಾದ:-** ದಿನಾಂಕ 25.9.2018 ರಂದು ಟೆಕ್ಸ್‌ಟೈಲ್ಸ್, ಮೊಬೈಲ್ ಫೋನ್ ಕಾಂಪೊನೆಂಟ್ಸ್, ಇಂಟಿಗ್ರೇಟೆಡ್ ಸರ್ಕ್ಯೂಟ್ ಬೋರ್ಡ್ಸ್, ಎಲ್.ಇ.ಡಿ. ಲೈಟ್ಸ್, ಸೋಲಾರ್ ಪವರ್ ಗೂಡ್ಸ್ ಮತ್ತು ಟಾಯ್ಸ್ ವಿಶನ್ ಗ್ರೂಪ್‌ಗಳ ಸದಸ್ಯರು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಉದ್ದೇಶಿತ ಕ್ಲಸ್ಟರ್‌ಗಳ ಅಭಿವೃದ್ಧಿ ಬಗ್ಗೆ ಸಂವಾದ ನಡೆಸಿರುತ್ತಾರೆ. ಸದರಿ ಸಂವಾದದಲ್ಲಿ ವಿಶನ್ ಗ್ರೂಪ್ ಸದಸ್ಯರು ವಿಶನ್ ಗ್ರೂಪ್ ಸಭೆಗಳಲ್ಲಿ ಚರ್ಚಿಸಲಾದ ವಿಷಯಗಳನ್ನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ವಿವರಿಸಿರುತ್ತಾರೆ. ಸನ್ಮಾನ್ಯ ಮುಖ್ಯಮಂತ್ರಿಯವರು ಕ್ಲಸ್ಟರ್‌ಗಳ ಅಭಿವೃದ್ಧಿ ಬಗ್ಗೆ ವಿಶನ್ ಗ್ರೂಪ್‌ಗಳು ನೀಡುವ ಎಲ್ಲಾ ಸಲಹೆಗಳ ಬಗ್ಗೆ ಸರ್ಕಾರವು ಸಕಾರಾತ್ಮಕ ಕ್ರಮಕೈಗೊಳ್ಳಲಿದ್ದು ಈ ಪ್ರದೇಶಗಳಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಪೂರಕ ವಾತಾವರಣ ನಿರ್ಮಿಸಲು ಅಗತ್ಯ ಸಲಹೆಗಳೊಂದಿಗೆ ಸಹಕಾರ ನೀಡುವಂತೆ ವಿಶನ್ ಗ್ರೂಪ್‌ಗಳ ಸದಸ್ಯರಿಗೆ ತಿಳಿಸಿದರು.

9. **ವಿಶನ್ ಗ್ರೂಪ್‌ಗಳ ಕ್ಲಸ್ಟರ್ ಭೇಟಿ:**- ವಿಶನ್ ಗ್ರೂಪ್ ಸದಸ್ಯರುಗಳು ಕ್ಲಸ್ಟರ್ ನೋಡಲ್ ಅಧಿಕಾರಿ ಮತ್ತು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರೊಂದಿಗೆ ಸಂಬಂಧಪಟ್ಟ ಕ್ಲಸ್ಟರ್ ಜಿಲ್ಲೆಗಳಿಗೆ ಭೇಟಿ ನೀಡಿ ಕ್ಲಸ್ಟರ್ ಅಭಿವೃದ್ಧಿಯ ಬಗ್ಗೆ ಅಧ್ಯಯನ ನಡೆಸಿರುತ್ತಾರೆ ಹಾಗೂ ಜಿಲ್ಲಾಧಿಕಾರಿಗಳು ಮತ್ತು ಸಂಬಂಧಪಟ್ಟ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಿರುತ್ತಾರೆ.

10. **ನಾಲೆಡ್ಜ್ ಪಾರ್ಟ್‌ನರ್ ಸೇವೆ ಹಾಗೂ ಮಾನವ ಸಂಪನ್ಮೂಲ ಸೇವೆಗಳು:**- ಯೋಜನೆಯ ಉದ್ದೇಶಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ವಿಶನ್ ಗ್ರೂಪ್‌ಗಳು ನೀಡುವ ವರದಿಗಳು ಹಾಗೂ ಸಲಹೆ ಸೂಚನೆಗಳ ಆಧಾರದ ಮೇಲೆ ಯೋಜನೆಯ ಅನುಷ್ಠಾನ ರೂಪು ರೇಷೆಗಳನ್ನು ರೂಪಿಸಲು ಮತ್ತು ಯೋಜನೆಯನ್ನು ಕ್ಲಸ್ಟರ್ ಮಟ್ಟದಲ್ಲಿ ಅನುಷ್ಠಾನಗೊಳಿಸಲು ಜ್ಞಾನ ಸಂಪನ್ಮೂಲ ಸೇವೆಗಳನ್ನು ಒದಗಿಸಲು Knowledge Partner Agency ಗಳಾದ Ernst and Young LLP ಮತ್ತು PricewaterhouseCoopers Pvt. Ltd. ರವರ ಸೇವೆಯನ್ನು ಪಡೆಯಲಾಗಿದೆ.

11. **ಯೋಜನೆ ಕಾರ್ಯಾಚರಣೆ ಮಾರ್ಗಸೂಚಿ:**- ಯೋಜನೆಯ ಅನುಷ್ಠಾನಕ್ಕೆ ಪೂರಕವಾಗಿ ಸಾಮಾನ್ಯ ಕಾರ್ಯಾಚರಣೆ ಮಾರ್ಗಸೂಚಿ (General Operational Guidelines)ನ್ನು ಹೊರಡಿಸಲಾಗಿದೆ. ಈ ಮಾರ್ಗಸೂಚಿಯು ಕೆಳಕಂಡ ಅಂಶಗಳನ್ನು ಒಳಗೊಂಡಿರುತ್ತದೆ.

(ಅ) ಯೋಜನೆಯ ಧ್ಯೇಯೋದ್ದೇಶಗಳು.
(ಆ) ಕ್ಲಸ್ಟರ್ ನೋಡಲ್ ಅಧಿಕಾರಿಯ ಕರ್ತವ್ಯ ಮತ್ತು ಜವಾಬ್ದಾರಿಗಳು.
(ಇ) ಕ್ಲಸ್ಟರ್‌ನ ಆಡಳಿತ ಚೌಕಟ್ಟು, ಕಾರ್ಯಕ್ರಮ ಅನುಷ್ಠಾನ ಸಂಸ್ಥೆಯ ಪಾತ್ರ ಜವಾಬ್ದಾರಿ.
(ಈ) ವಿಶನ್ ಗ್ರೂಪ್ ಕಾರ್ಯಾಚರಣೆ ಮಾರ್ಗಸೂಚಿ.
(ಉ) ಯೋಜನೆಯಡಿ ನೀಡಲಾಗುವ ಸರ್ಕಾರದ ನೆರವು.
(ಊ) ಯೋಜನೆಯ ಮೇಲ್ವಿಚಾರಣೆ.

12. **ರಾಜ್ಯ ಹಾಗೂ ಜಿಲ್ಲಾ ಮಟ್ಟದ ಸಲಹಾ ಮತ್ತು ಮೇಲ್ವಿಚಾರಣೆ ಸಮಿತಿಗಳು:**-

ಯೋಜನೆಯ ಪ್ರಗತಿ ಪರಿಶೀಲಿಸಲು ಮತ್ತು ಅನುಷ್ಠಾನ ಸಲಹೆ ಸೂಚನೆಗಳನ್ನು ನೀಡಲು ರಾಜ್ಯ ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಕೆಳಕಂಡಂತೆ ಸಮಿತಿಗಳನ್ನು ರಚಿಸಿ ಸರ್ಕಾರದ ಆದೇಶಗಳನ್ನು ಹೊರಡಿಸಲಾಗಿದೆ.

(ಅ) **ರಾಜ್ಯ ಮಟ್ಟದ ಚಲನಾ ಸಮಿತಿ:** ಸನ್ಮಾನ್ಯ ಮುಖ್ಯಮಂತ್ರಿಗಳು ಸದರಿ ಸಮಿತಿಯ ಅಧ್ಯಕ್ಷರಾಗಿದ್ದು ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಉಪಾಧ್ಯಕ್ಷರಾಗಿರುತ್ತಾರೆ. ಸದರಿ ಸಮಿತಿಯಲ್ಲಿ ಯೋಜನೆಗೆ ಅನುಷ್ಠಾನಕ್ಕೆ ಸಂಬಂಧಪಟ್ಟ ಇಲಾಖೆಗಳ ಮಾನ್ಯ ಸಚಿವರು, ಕಾರ್ಯದರ್ಶಿಗಳು, 9 ವಿಶನ್ ಗ್ರೂಪ್‌ಗಳ ಅಧ್ಯಕ್ಷರು, ಸಿಐಐ, ಎಫ್‌ಕೆಸಿಸಿಐ ಮತ್ತು ಕಾಸಿಯಾ, ಅಧ್ಯಕ್ಷರು ಸದಸ್ಯರಾಗಿರುತ್ತಾರೆ.

(ಆ) **ಜಿಲ್ಲಾ ಮಟ್ಟದ ಸಲಹಾ ಸಮಿತಿ:** ಸಂಬಂಧಪಟ್ಟ ಕ್ಲಸ್ಟರ್ ಜಿಲ್ಲೆಯ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಸದರಿ ಸಮಿತಿಯ ಅಧ್ಯಕ್ಷರಾಗಿದ್ದು ಸ್ಥಳೀಯ ಶಾಸಕರು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು ಅನುಷ್ಠಾನಕ್ಕೆ ಸಂಬಂಧಪಟ್ಟ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಜಿಲ್ಲೆಯ ಕೈಗಾರಿಕೆ ಮತ್ತು ವಾಣಿಜ್ಯ ಸಂಘಗಳು ಸದಸ್ಯರಾಗಿರುತ್ತಾರೆ.

13. **ಪ್ರಗತಿ ಪರಿಶೀಲನಾ ಸಭೆಗಳು:-** ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು, ಸನ್ಮಾನ್ಯ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು, ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಹಾಗೂ ಆಯುಕ್ತರು, ಬೃಹತ್ ಮತ್ತು ಮೆಗಾ ಕೈಗಾರಿಕಾ ನಿರ್ದೇಶನಾಲಯ ರವರ ಅಧ್ಯಕ್ಷತೆಯಲ್ಲಿ ನಿಯತಕಾಲಿಕವಾಗಿ ಯೋಜನೆಯ ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸಲಾಗುತ್ತಿದೆ.

14. **ಕ್ಲಸ್ಟರ್‌ವಾರು ಪ್ರಗತಿ:-**

(ಅ) **ಕೊಪ್ಪಳ ಕ್ಲಸ್ಟರ್:** ಕೊಪ್ಪಳ ಜಿಲ್ಲೆಯಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಗೊಂಬೆ ತಯಾರಿಕೆ (ಟಾಯ್ಸ್) ಕ್ಲಸ್ಟರ್ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಟಾಯ್ಸ್ ವಿಶನ್ ಗ್ರೂಪ್‌ನವರು ವರದಿಯನ್ನು ನೀಡಿರುತ್ತಾರೆ. ಅದರಂತೆ, ಮೊದಲ ಹಂತದಲ್ಲಿ ಕೊಪ್ಪಳದಲ್ಲಿ ಏಕಸ್ ಎಸ್.ಇ.ಜೆಡ್ ಪ್ರೈವೇಟ್ ಲಿಮಿಟೆಡ್ ರವರು ಗೊಂಬೆ ತಯಾರಿಕೆ ವಿಶೇಷ ಆರ್ಥಿಕ ವಲಯ (ಎಸ್.ಇ.ಜೆಡ್) ವನ್ನು 128 ಎಕರೆ ಪ್ರದೇಶದಲ್ಲಿ ಸ್ಥಾಪಿಸಲಿದ್ದು ಇದರಲ್ಲಿ ಚೀನಾ ದೇಶದ ಪ್ರಮುಖ ಗೊಂಬೆ ತಯಾರಿಕಾ ಕಂಪನಿಗಳು ಬಂಡವಾಳ ಹೂಡಲಿವೆ. ಹಾಲಿ ಸದರಿ ಎಸ್.ಇ.ಜೆಡ್ ನಲ್ಲಿ ಚೀನಾ ಮೂಲದ ಜಿ.ಎಫ್.ಟಿ ಇಂಡಸ್ಟ್ರೀಸ್ ಕಂಪನಿ ಮತ್ತು ಏಕಸ್ ಕಂಪನಿಯ ಜಂಟಿ ಸಹಭಾಗಿತ್ವದಲ್ಲಿ ರೂ.1500 ಕೋಟಿ ಬಂಡವಾಳ ಹೂಡಲು ಮತ್ತು 20,000 ಉದ್ಯೋಗ ಸೃಜನೆ ಮಾಡಲು ರಾಜ್ಯ ಸರ್ಕಾರದೊಂದಿಗೆ ಒಡಂಬಡಿಕೆಗೆ ಸಹಿ ಮಾಡಿರುತ್ತಾರೆ. ಸದರಿ ಕ್ಲಸ್ಟರ್‌ನ್ನು ಸನ್ಮಾನ್ಯ ಮುಖ್ಯ ಮಂತ್ರಿಯವರು, ಸನ್ಮಾನ್ಯ ಉಪ ಮುಖ್ಯ ಮಂತ್ರಿಯವರು ಹಾಗೂ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ದಿನಾಂಕ 18.2.2019ರಂದು ಉದ್ಘಾಟಿಸಿರುತ್ತಾರೆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಕೊಪ್ಪಳದಲ್ಲಿ ದೇಶೀಯ ಮತ್ತು ಸಣ್ಣ ಪ್ರಮಾಣದ ಕೈಗಾರಿಕಾ ಕಂಪನಿಗಳಿಗೆ 100 ಎಕರೆ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಲಿದೆ. ವಿಶನ್ ಗ್ರೂಪ್ ರವರು ಈ ಕ್ಲಸ್ಟರ್‌ಗೆ ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು ಅವಶ್ಯವಿರುವ ರಿಯಾಯಿತಿ ಮತ್ತು ಪ್ರೋತ್ಸಾಹಗಳ ಹಾಗೂ ತರಬೇತಿ ಅವಶ್ಯಕತೆಗಳ ಬಗ್ಗೆ ಸಲ್ಲಿಸಿದ್ದ ಬೇಡಿಕೆ ಪಟ್ಟಿಯನ್ನು ಪರಿಗಣಿಸಿ ಸರ್ಕಾರವು ಸದರಿ ಕ್ಲಸ್ಟರ್‌ಗೆ ವಿಶೇಷ ರಿಯಾಯಿತಿ ಮತ್ತು ಪ್ರೋತ್ಸಾಹನೆಗಳನ್ನು ಸರ್ಕಾರದ ಆದೇಶ ದಿನಾಂಕ 5.3.2019ರಲ್ಲಿ ಘೋಷಿಸಿದೆ (ಪ್ರತಿಯನ್ನು ಲಗತ್ತಿಸಿದೆ). ಈ ಕ್ಲಸ್ಟರ್‌ಗೆ ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸಲು ದೆಹಲಿ ಎನ್.ಸಿ.ಆರ್ ವಲಯದ ಪ್ರಮುಖ ಗೊಂಬೆ ತಯಾರಿಕಾ ಕಂಪನಿಗಳೊಂದಿಗೆ ದೆಹಲಿಯಲ್ಲಿ ರೋಡ್ ಶೋ ಕಾರ್ಯಕ್ರಮವನ್ನು ದಿನಾಂಕ 28.12.2018ರಂದು ನಡೆಸಲಾಗಿದೆ.

(ಆ) **ಬಳ್ಳಾರಿ ಕ್ಲಸ್ಟರ್:** ಬಳ್ಳಾರಿ ಜಿಲ್ಲೆಯಲ್ಲಿನ ಜವಳಿ ಕ್ಲಸ್ಟರ್ ಅಭಿವೃದ್ಧಿಗೆ ಸಂಬಂಧಿಸಿದಂತೆ ವಿಶನ್ ಗ್ರೂಪ್ ರವರು ವರದಿಯನ್ನು ಸಲ್ಲಿಸಿದ್ದು, ಮೊದಲ ಹಂತದಲ್ಲಿ 4 ಕಂಪನಿಗಳು ಸಿದ್ಧ ಉಡುಪು ತಯಾರಿಕಾ ಘಟಕಗಳನ್ನು ಬಳ್ಳಾರಿ ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಒಟ್ಟು ರೂ.305 ಕೋಟಿ ಬಂಡವಾಳ ಹೂಡಿ 15,200 ಉದ್ಯೋಗ ಸೃಜಿಸಲು ರಾಜ್ಯ ಸರ್ಕಾರದೊಂದಿಗೆ ಒಡಂಬಡಿಕೆಗೆ ಸಹಿ ಮಾಡಿರುತ್ತಾರೆ. ಸದರಿ ಕ್ಲಸ್ಟರ್‌ನ್ನು ಸನ್ಮಾನ್ಯ ಮುಖ್ಯ ಮಂತ್ರಿಯವರು, ಸನ್ಮಾನ್ಯ ಉಪ ಮುಖ್ಯ ಮಂತ್ರಿಯವರು ಹಾಗೂ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ದಿನಾಂಕ 18.2.2019ರಂದು ಉದ್ಘಾಟಿಸಿರುತ್ತಾರೆ. ದಿನಾಂಕ 6.3.2019ರಂದು ನಡೆದ ರಾಜ್ಯ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಸಭೆಯಲ್ಲಿ ಮೆ: ಆಕಾಂಕ್ಷ ರೂರಲ್ ಡೆವಲಪ್‌ಮೆಂಟ್ ಸೊಸೈಟಿ ರವರು ಬಳ್ಳಾರಿ ಕುಡತಿನಿ ಕೈಗಾರಿಕಾ ಪ್ರದೇಶದಲ್ಲಿ ರೂ.29.04 ಕೋಟಿ ಬಂಡವಾಳದೊಂದಿಗೆ 2,000 ಜನರಿಗೆ ಉದ್ಯೋಗ ಸೃಜಿಸುವ ರೆಡಿಮೇಡ್ ಗಾರ್ಮೆಂಟ್ಸ್ ಉತ್ಪಾದನಾ ಘಟಕ ಸ್ಥಾಪಿಸುವ ಯೋಜನೆಯನ್ನು ಅನುಮೋದಿಸಲಾಗಿದೆ. ಈ ಕಂಪನಿಗಳಿಗೆ ಅವಶ್ಯವಿರುವ ಭೂಮಿ ಮತ್ತು ಇತರೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕ್ರಮವಹಿಸಲಾಗಿದೆ. ವಿಶನ್ ಗ್ರೂಪ್

ರವರು ಈ ಕ್ಲಸ್ಟರ್‌ಗೆ ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು ಅವಶ್ಯವಿರುವ ರಿಯಾಯಿತಿ ಮತ್ತು ಪ್ರೋತ್ಸಾಹಗಳ ಹಾಗೂ ತರಬೇತಿ ಅವಶ್ಯಕತೆಗಳ ಬಗ್ಗೆ ಸಲ್ಲಿಸಿದ್ದ ಬೇಡಿಕೆ ಪಟ್ಟಿಯನ್ನು ಪರಿಗಣಿಸಿ ಸರ್ಕಾರವು ಸದರಿ ಕ್ಲಸ್ಟರ್‌ಗೆ ವಿಶೇಷ ರಿಯಾಯಿತಿ ಮತ್ತು ಪ್ರೋತ್ಸಾಹನೆಗಳನ್ನು ಸರ್ಕಾರದ ಆದೇಶ ದಿನಾಂಕ 5.3.2019ರಲ್ಲಿ ಘೋಷಿಸಿದೆ (ಪ್ರತಿಯನ್ನು ಲಗತ್ತಿಸಿದೆ).

(ಇ) **<u>ಚಿಕ್ಕಬಳ್ಳಾಪುರ ಕ್ಲಸ್ಟರ್:</u>** ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಮೊಬೈಲ್ ಫೋನ್ ಉತ್ಪಾದನಾ ಕ್ಲಸ್ಟರ್‌ನ್ನು ಮಾಸ್ತೇನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಮತ್ತು ಬಾಗೇಪಲ್ಲಿಯಲ್ಲಿ ಸ್ಥಾಪಿಸಲು ಈ ಕ್ಲಸ್ಟರ್‌ನ ವಿಶನ್ ಗ್ರೂಪ್ ರವರು ಪ್ರಸ್ತಾವಿಸಿರುತ್ತಾರೆ. ಈ ವಲಯದಲ್ಲಿ ಈಗಾಗಲೇ ಕೋಲಾರದ ನರಸಾಪುರದಲ್ಲಿ ಬಂಡವಾಳ ಹೂಡುತ್ತಿರುವ ವಿಸ್‌ಟ್ರಾನ್ ಕಂಪನಿಯವರು ಟೈವಾನ್ ದೇಶದ ತಮ್ಮ ಬಿಡಿಭಾಗಗಳ ಉತ್ಪಾದಕರನ್ನು ಈ ಪ್ರದೇಶದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುಲು ಪ್ರೇರೇಪಿಸುವುದಾಗಿ ತಿಳಿಸಿರುತ್ತಾರೆ. ಇದಲ್ಲದೆ ಟೈವಾನ್ ಮೂಲದ 2 ಮತ್ತು ಭಾರತೀಯ ಮೂಲದ 8 ಕಂಪನಿಗಳು ಈ ಕ್ಲಸ್ಟರ್‌ನಲ್ಲಿ ಬಂಡವಾಳ ಹೂಡಲು ಆಸಕ್ತಿ ತೋರಿರುತ್ತವೆ. ವಿಶನ್ ಗ್ರೂಪ್ ರವರು ಈ ಕ್ಲಸ್ಟರ್‌ಗೆ ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು ಅವಶ್ಯವಿರುವ ರಿಯಾಯಿತಿ ಮತ್ತು ಪ್ರೋತ್ಸಾಹಗಳ ಹಾಗೂ ತರಬೇತಿ ಅವಶ್ಯಕತೆಗಳ ಬಗ್ಗೆ ಸಲ್ಲಿಸಿದ್ದ ಬೇಡಿಕೆ ಪಟ್ಟಿಯನ್ನು ಸಲ್ಲಿಸಿದ್ದು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಈ ಕ್ಲಸ್ಟರ್‌ಗೆ ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸಲು ದೆಹಲಿ ಎನ್.ಸಿ.ಆರ್ ವಲಯದ ಪ್ರಮುಖ ಮೊಬೈಲ್ ಫೋನ್ ತಯಾರಿಕಾ ಕಂಪನಿಗಳೊಂದಿಗೆ ದೆಹಲಿಯಲ್ಲಿ ರೋಡ್‌ಶೋ ಕಾರ್ಯಕ್ರಮವನ್ನು ದಿನಾಂಕ 7.2.2019ರಂದು ನಡೆಸಲಾಗಿದೆ.

(ಈ) **<u>ಮೈಸೂರು ಕ್ಲಸ್ಟರ್:</u>** ಮೈಸೂರು ಜಿಲ್ಲೆಯಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಪಿ.ಸಿ.ಬಿ / ಐ.ಸಿ.ಬಿ ಉತ್ಪಾದನಾ ಕ್ಲಸ್ಟರ್‌ನ್ನು ನಂಜನಗೂಡು ಸಮೀಪದ ಇಮ್ಮಾವು ಕೈಗಾರಿಕಾ ಪ್ರದೇಶದಲ್ಲಿ ಸ್ಥಾಪಿಸಲು ಈ ಕ್ಲಸ್ಟರ್‌ನ ವಿಶನ್ ಗ್ರೂಪ್ ರವರು ಪ್ರಸ್ತಾವಿಸಿರುತ್ತಾರೆ. ಈ ಕ್ಲಸ್ಟರ್‌ನಲ್ಲಿ ಬಂಡವಾಳ ಹೂಡಲು ಟೈವಾನ್/ಚೈನಾ ಮೂಲದ 3 ಮತ್ತು ಭಾರತೀಯ ಮೂಲದ 3 ಕಂಪನಿಗಳು ಆಸಕ್ತಿ ತೋರಿರುತ್ತವೆ. ವಿಶನ್ ಗ್ರೂಪ್ ರವರು ಈ ಕ್ಲಸ್ಟರ್‌ಗೆ ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು ಅವಶ್ಯವಿರುವ ರಿಯಾಯಿತಿ ಮತ್ತು ಪ್ರೋತ್ಸಾಹಗಳ ಹಾಗೂ ತರಬೇತಿ ಅವಶ್ಯಕತೆಗಳ ಬಗ್ಗೆ ಸಲ್ಲಿಸಿದ್ದ ಬೇಡಿಕೆ ಪಟ್ಟಿಯನ್ನು ಸಲ್ಲಿಸಿದ್ದು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಈ ಕ್ಲಸ್ಟರ್‌ಗೆ ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸಲು ದೆಹಲಿ ಎನ್.ಸಿ.ಆರ್ ವಲಯದ ಪ್ರಮುಖ ಮೊಬೈಲ್ ಫೋನ್ ತಯಾರಿಕಾ ಕಂಪನಿಗಳೊಂದಿಗೆ ದೆಹಲಿಯಲ್ಲಿ ರೋಡ್‌ಶೋ ಕಾರ್ಯಕ್ರಮವನ್ನು ದಿನಾಂಕ 7.2.2019ರಂದು ನಡೆಸಲಾಗಿದೆ.

(ಉ) **ಕಲಬುರಗಿ, ಚಿತ್ರದುರ್ಗ, ಹಾಸನ, ಬೀದರ್** ಮತ್ತು **ತುಮಕೂರು** ಕ್ಲಸ್ಟರ್‌ಗಳಿಗೆ ಸಂಬಂಧಿಸಿದಂತೆ ಕೈಗಾರಿಕೆಗಳ ಸ್ಥಾಪನೆಗೆ ಭೂಮಿಯನ್ನು ಗುರುತಿಸಲಾಗಿದ್ದು ಬಂಡವಾಳ ಹೂಡಿಕೆದಾರರೊಂದಿಗೆ ಸಮಾಲೋಚನೆಗಳನ್ನು ನಡೆಸಲಾಗುತ್ತಿದೆ. ಕ್ಲಸ್ಟರ್ ಅಭಿವೃದ್ಧಿಯ ಅವಶ್ಯಕತೆಗಳು, ಬಂಡವಾಳ ಆರ್ಕಷಣೆ, ಸರ್ಕಾರದಿಂದ ಅವಶ್ಯವಿರುವ ಪ್ರೋತ್ಸಾಹನೆಗಳು ಹಾಗೂ ತರಬೇತಿ ಅವಶ್ಯಕತೆಗಳ ಬಗ್ಗೆ ಸಂಬಂಧಪಟ್ಟ ಕ್ಲಸ್ಟರ್ ವಿಶನ್ ಗ್ರೂಪ್‌ರವರು ಸಮಾಲೋಚನೆ ನಡೆಸುತ್ತಿದ್ದು ವರದಿಗಳನ್ನು ನಿರೀಕ್ಷಿಸಿದೆ.

*****